ವಿಜಯವಾಣಿ

ಕನ್ನಡಿಗರ ಧ್ವನಿ

**Monday 31th October 2022, Page No.5B**

**Kannada Rajyotsava Awardees: Sri. K.G. Subbarama Setty Treasurer, RSST**



ವಿಜಯವಾಣಿ ನಂ.1

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI

# ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು

ಸೋಮವಾರ 31
ಅಕ್ಟೋಬರ್ 2022
31 OCTOBER 2022

5B

ವಿವಿಧ ಕ್ಷೇತ್ರಗಳಲ್ಲಿ ವಿಶೇಷ ಸಾಧನೆ ಮಾಡಿರುವವರು, ನಾಡಿಗೆ ಕೊಡುಗೆ ನೀಡಿದವರನ್ನು ಗುರುತಿಸಿ, ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿ ಕೃತಜ್ಞತೆ ಸಲ್ಲಿಸುವ ಪರಿಪಾಠವನ್ನು ಸರ್ಕಾರ ರೂಢಿಸಿಕೊಂಡು ಬಂದಿದೆ. ಈ ಬಾರಿ 67 ಸಾಧಕರನ್ನು ಹೆಕ್ಕಿ ತೆಗೆದಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನವೆಂಬರ್ 1ರಂದು ಸನ್ಮಾನಿಸುತ್ತಿದೆ. ಜನರ ಗಮನ ಸೆಳೆದ ಸಾಧಕರು ಒಂದಷ್ಟು ಮಂದಿಯಾದರೆ, ಪ್ರಶಸ್ತಿಗೆ ಅರ್ಹರೆನಿಸಿದರೂ ತೆರೆಮರೆಯಲ್ಲಿರುವವರು ಅನೇಕರು. ಅವರಲ್ಲಿ ಉತ್ತಮರು, ಅರ್ಹರನ್ನು ಗುರುತಿಸಿದೆ. ಜಿಲ್ಲೆ, ಪ್ರದೇಶ, ಸಮುದಾಯ, ಕ್ಷೇತ್ರವಾರು ಪರಿಗಣಿಸಿ ಸಮತೂಕದ ಪಟ್ಟಿಯನ್ನು ಪ್ರಕಟಿಸಲಾಗಿದೆ.

## ತೆರೆಮರೆ ಸಾಧಕರು-ಗಣ್ಯರಿಗೆ ಗೌರವ

### ಸಂಕೀರ್ಣ

**ಕೆ.ಜಿ.ಸುಬ್ಬರಾಮಶೆಟ್ಟಿ** ಬೆಂಗಳೂರು
ಪ್ರತಿಷ್ಠಿತ ಆರ್.ವಿ.ಶೈಕ್ಷಣಿಕ ಸಂಸ್ಥೆಗಳನ್ನು ಮುನ್ನಡೆಸುತ್ತಿದ್ದಾರೆ. ಕಾಲೇಜು ಹಂತದಿಂದಲೂ ಶಿಕ್ಷಣ ಕ್ಷೇತ್ರದ ಸುಧಾರಣೆಯ ಕನಸು ಕಂಡಿದ್ದು, ಇಂಜಿನಿಯರಿಂಗ್ ಸಹಿತ ಹಲವು ಶಿಕ್ಷಣ ಸಂಸ್ಥೆಗಳಲ್ಲಿ ಪ್ರಮುಖ ಜವಾಬ್ದಾರಿ ನಿಭಾವಣೆ.

**ವಿದ್ವಾನ್ ಗೋಪಾಲಕೃಷ್ಣ ಶರ್ಮ** ಬೆಂಗಳೂರು
ಮೂಲತಃ ಉತ್ತರ ಕನ್ನಡದ ಸಿದ್ದಾಪುರದವರು. ಹೊನ್ನಾವರದಲ್ಲಿ ಸಂಸ್ಕೃತ ಸಾಹಿತ್ಯ ಶಿಕ್ಷಣ ಪಡೆದ ಬಳಿಕ ಜ್ಯೋತಿಷ್ಯ ವಿದ್ವತ್, ಕೇರಳದಲ್ಲಿ ಮಂತ್ರಶಾಸ್ತ್ರ ಅಧ್ಯಯನ, ಅಷ್ಟ ಮಂಗಲ ಪ್ರಶ್ನೆ ಕ್ಷೇತ್ರದಲ್ಲಿ ಅಧ್ಯಯನ ಮುಗಿಸಿ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

**ಸೋಲಿಗರ ಮಾದಮ್ಮ,** ಚಾಮರಾಜನಗರ
ಬುಡಕಟ್ಟು ಸಮುದಾಯದ ಹಿತರಕ್ಷಣೆಗೆ ಹೋರಾಡಿದ ದಿಟ್ಟ ಮಹಿಳೆ ಹನೂರು ತಾಲೂಕಿನ ಜೀರಿಗೆಗದ್ದೆಯ ದೊಡ್ಡಮಾದಮ್ಮ. ಹಾಡಿಗಳಲ್ಲಿ ಸಾವಿರಕ್ಕೂ ಹೆಚ್ಚು ಉಚಿತ ಹೆರಿಗೆ ಮಾಡಿಸಿದ್ದಾರೆ. ಆದಿವಾಸಿ ಕಲೆ, ಸಂಸ್ಕೃತಿ-ಪದ್ಧತಿ ಆಳಜ್ಞಾನವಿದೆ.

### ಪತ್ರಿಕೋದ್ಯಮ

**ಎಚ್.ಆರ್.ಶ್ರೀಶ** ಬೆಂಗಳೂರು
ಪತ್ರಿಕೋದ್ಯಮ ಕ್ಷೇತ್ರದಲ್ಲಿ ಸತತ ನಾಲ್ಕು ದಶಕಗಳಿಂದ ಸೇವೆ ಸಲ್ಲಿಸುತ್ತಿರುವ ಎಚ್.ಆರ್.

### ವೈದ್ಯಕೀಯ

**ಡಾ. ಎಚ್.ಎಸ್.ಮೋಹನ್,** ಶಿವಮೊಗ್ಗ
ಸಾಗರದ ಹೆಸರಾಂತ ನೇತ್ರ ತಜ್ಞ, ಯಕ್ಷ ಸಂಘಟಕ, ವೈದ್ಯಕೀಯ ಸಾಹಿತಿಯಾಗಿ ಗುರುತಿಸಿಕೊಂಡು ಕನ್ನಡದಲ್ಲಿ 3500, ಇಂಗ್ಲಿಷ್‌ನಲ್ಲಿ 1500ಕ್ಕೂ ಹೆಚ್ಚು ಲೇಖನ ಬರೆದಿದ್ದಾರೆ. 21 ಪುಸ್ತಕಗಳು ಕನ್ನಡದಲ್ಲಿ, 1 ಪುಸ್ತಕ ಇಂಗ್ಲಿಷ್‌ನಲ್ಲಿ ಪ್ರಕಟವಾಗಿವೆ.

**ಡಾ.ಎಂ. ಬಸವಂತಪ್ಪ** ದಾವಣಗೆರೆ
ಚನ್ನಗಿರಿ ತಾಲೂಕು ಸಂತೇಬೆನ್ನೂರಿನ ಡಾ.ಎಂ. ಬಸವಂತಪ್ಪ 35 ವರ್ಷಗಳಿಂದ ವೈದ್ಯರಾಗಿ ಕಡಿಮೆ ದರದಲ್ಲಿ ಚಿಕಿತ್ಸೆ, ಬಡ ರೋಗಿಗಳಿಗೆ ಉಚಿತ ಸೇವೆ ನೀಡುತ್ತ ಬಂದಿದ್ದಾರೆ. ಕರೊನಾ ಸಮಯದಲ್ಲೂ ಆಸ್ಪತ್ರೆಯ ಬಾಗಿಲು ಹಾಕಿಲ್ಲ.

### ಸ್ವಾತಂತ್ರ್ಯದ ಅಮೃತ ಮಹೋತ್ಸವ ಪ್ರಶಸ್ತಿ

### ಸಂಘ-ಸಂಸ್ಥೆಗಳು

**ಶ್ರೀ ರಾಮಕೃಷ್ಣ ಆಶ್ರಮ** ಮೈಸೂರು
ಸ್ವಾಮಿ ಸಿದ್ಧೇಶ್ವರಾನಂದ ಅವರಿಂದ 1925ರ ಜೂನ್ 11ರಂದು ಸ್ಥಾಪಿಸಲಾಯಿತು. 1932ರಲ್ಲಿ ಮೈಸೂರು ಮಹಾರಾಜರು ಒಂದು ಸಣ್ಣ ಕಟ್ಟಡ ನಿರ್ಮಿಸಲು ಸಹಾಯ ಮಾಡಿದರು.

### ರಂಗಭೂಮಿ

**ತಿಪ್ಪಣ್ಣ ಶಿವಲಿಂಗಪ್ಪ ಹೆಳವರ** ಯಾದಗಿರಿ
ರಂಗಭೂಮಿ ಕಲಾ ಪ್ರಕಾರಗಳಲ್ಲಿ ಒಂದಾದ ಬಯಲಾಟವನ್ನು ಹೆಚ್ಚು ಪೋಷಿಸಿದ್ದಾರೆ. ಬಾಲ್ಯದಿಂದಲೂ ಹವ್ಯಾಸಿ ನಾಟಕ. ಬಯಲಾಟ ಪ್ರದರ್ಶನ ಮಾಡುವ ಮೂಲಕ ನೂರಾರು ಕಲಾವಿದರನ್ನು ಬೆಳೆಸಿದ ಕೀರ್ತಿ ಇವರಿಗಿದೆ.

**ಲಲಿತಾಬಾಯಿ ಚನ್ನದಾಸರ** ವಿಜಯಪುರ
61 ವರ್ಷದ ಲಲಿತಾಬಾಯಿ ವಿವಿಧ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಗುಬ್ಬಿ ವೀರಣ್ಣ ಕಂಪನಿ ಸೇರಿ ವಿವಿಧ ನಾಟಕ ಕಂಪನಿಗಳಲ್ಲಿ ಕೆಲಸ ಮಾಡಿದ್ದಾರೆ. ಚಿಂದೋಡಿ ಲೀಲಾ ಅವರೊಂದಿಗೆ ಸಮಾಜಕ್ಕೆ ಶಿಕ್ಷೆ ನಾಟಕದಲ್ಲಿ ಅಭಿನಯಿಸಿದ್ದು ವಿಶೇಷ.

### ಆಡಳಿತ

**ಡಾ. ಎಲ್.ಎಚ್.ಮಂಜುನಾಥ,** ಶಿವಮೊಗ್ಗ
ತೀರ್ಥಹಳ್ಳಿ ತಾಲೂಕು ಬಸವಾನಿಯ ಡಾ. ಎಲ್.ಎಚ್.ಮಂಜುನಾಥ ಪಶು ವೈದ್ಯಾಧಿಕಾರಿಯಾಗಿದ್ದರು. ಪ್ರಸ್ತುತ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಂಪೂರ್ಣ ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ.

**ಮದನ್‌ಗೋಪಾಲ್** ಬೆಂಗಳೂರು
ಎಂ.ಮದನ್‌ಗೋಪಾಲ್ ಐಎಎಸ್ ನಿವೃತ್ತ ಅಧಿಕಾರಿ ಆಗಿದ್ದು, ಮೂರು ದಶಕಗಳ ಕಾಲ ಕರ್ನಾಟಕ ಸರ್ಕಾರದ ಕೇಡರ್ ಅಡಿಯಲ್ಲಿ ವಿವಿಧ ಇಲಾಖೆಗಳ ಜವಾಬ್ದಾರಿಗಳನ್ನು ಉತ್ತಮವಾಗಿ ನಿರ್ವಹಿಸಿದ್ದಾರೆ.